# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ



# ರೂತಳ ಪ್ರೀತಿಯ ಕಥೆ


ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಅಳವಡಿಸುವವರು: Lyn Doerksen
Alastair P.
ಪದ್ಮಾ ಸೈಲೇಸ್: Vinay Shirol



ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada



©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.




ನೀವು ನಿಮ್ಮ ಪಿತೃಗಳು ಆಥಾವ ನಿಮಗಿಂತ ಮೊದಲು ಹುಟ್ಟಿದವರನ್ನು ಕೇಳಿದರೆ ನಿಮಗೆ ಅವರು ಹೇಗಿದ್ದರು ಎಂಬುವುದಾಗಿ ತಿಳಿದು ಬರುತ್ತದೆ. ಅದನ್ನು ನೀವು ಕೇಳಿದಾಗ ನಿಮಗೆ ಆಶ್ಚರ್ಯವಾಗಬಹುದು. ಸತ್ಯವೇದದಲ್ಲಿಯೂ ಸಹಾ ಇಂತ ಸಂಗತಿಯನ್ನು ನೀವು ನೋಡಬಹುದು. ರೂತಳು ಸಹ ಯೇಸುವಿನ ಪಿತೃಗಳಲ್ಲಿ ಒಬ್ಬಳು – ಮೊವಾಬ್ಯಳಾದ ಅವಳು ವಿಗ್ರ ಆರಾಧನೆ ಮಾಡುತ್ತೀದ್ದಳು.



ಈ ರೂತಳ ಚರಿತ್ರೆಯು ಎಸ್ರಾಯೇಲ್ಯದಲ್ಲಿ ಸಂಸೋನನ ನಂತರ ಪ್ರಾರಂಭವಾಗುತ್ತದೆ. ದೇವರ ಜನರು ದೇವರಿಗೆ ಅವಿದೇಯರಾಗಿ ನಡೆಯುವಾಗ ಆ ದೇಶದಲ್ಲಿ ಭಯಂಕರವಾದ ಬರಗಾಲ ಉಂಟಾಗುತ್ತದೆ. ಯಾವ ತರವಾದ ಬರಗಾಲ ಎಂದು ನಿಮಗೆ ಗೋತ್ತಾ? ಆ ಕಾಲದಲ್ಲಿ ಯಾವುದೇ ವಿಧವಾದ ಗಿಡಮರಗಳು ಫಲ ಕೊಡದೆ ಮತ್ತು ಪ್ರಾಣಿಗಳು ಮತ್ತು ಜನರು ಆಹಾರ ವಿಲ್ಲದೆ ಸಾಯುವಂತಹ ಕಠಿಣ ಬರಗಾಲ ಆದಾಗಿತ್ತು.





3

ಎಲಿಮೇಲಕನೆಂಬ ಒಬ್ಬ ಮನುಷ್ಯನು ತನ್ನ ಹೆಂಡತಿ ಮತ್ತು ಎರಡು ಗಂಡು ಮಕ್ಕಳೊಂದಿಗೆ ಆಹಾರವನ್ನು ಹುಡುಕುತ್ತ ಬೆತ್ಲಹೇಮ್ ಎಂಬ ಸ್ಥಳಕ್ಕೆ ಬಂದನು, ಅದು ಮೋವಾಬ್ ದೇಶದ ಒಂದು ಪಟ್ಟಣವಾಗಿತ್ತು. ಅಲ್ಲಿ ಇರುವಂತ ಎಲ್ಲಾ ಜನರು ವಿಗ್ರಹವನ್ನು ಆರಾಧನೆಮಾಡುವವರಾಗಿದ್ದರು.



4

ಎಲಿಮೇಲಕನು ಮತ್ತು ಅವನ ಕುಟುಂಬವು ಮೋವಾಬ್ ದೇಶದಲ್ಲಿ ಇರುವಾಗ ಅದು ಅವರಿಗೆ ಅನುಕೂಲವಾಗಲಿಲ್ಲ.




ಅಲ್ಲಿ ಎಲಿಮೇಲೆಕನು ತನ್ನ ಎರಡು ಮಕ್ಕಳೊಂದಿಗೆ ಸತ್ತು ತನ್ನ ಹೆಂಡತಿಯಾದ ನವೋಮಿ ಮತ್ತು ಸೊಸೆಯರನ್ನು ಬಿಟ್ಟು ಹೋದನು. ಆ ಸೊಸೆಯರಾದ ರೂತ್, ಒರ್ಫ ಇವರು ಮೋವಾಬ್ ದೇಶದವರು.

5

ವಿದೇವೆಯಾದ ನವೋಮಿಯು ದೇವರು ತನ್ನ ಜನರ ಪ್ರಾರ್ಥನೆಯನ್ನು ಕೇಳಿ ತನ್ನ ಜನರಿಗೆ ಆಹಾರವನ್ನು ಕೊಟ್ಟನೆಂದು ತಿಳಿದು, ತಿರುಗಿ ತನ್ನ ದೇಶಕ್ಕೆ ಹೋಗಲು ಬಯಸಿ ತನ್ನ ಸೊಸೆಯಂದಿರಿಗೆ ಹೇಳಿದ್ದೆನೆಂದರೆ, ನೀವು ಇಲ್ಲೆ ಉಳಿದು ಪುನ: ಮದುವೆಯಾಗಿರಿ ಎಂದು ಅವರಿಗೆ ತಿಳಿಸಿದಳು.



6

ಆ ಮಾತನ್ನು ಕೇಳಿ ಒರ್ಫಳು ತಿರುಗಿ ತನ್ನ ಮನೆಗೆ ಹೋದಳು. ಆದರೆ ರೂತಳು ಅದನ್ನು ತಿರಸ್ಕರಿಸಿ ಒಂದು ಒಳ್ಳೆ ಪದ್ಯವನ್ನು ಹೇಳುವುದರ ಮೂಲಕವಾಗಿ ತನ್ನ ಅತ್ತೆಯನ್ನು ಬಿಟ್ಟು ಹೋಗುವುದಿಲ್ಲ ಎಂದು ಪ್ರಮಾಣಮಾಡಿದಳು.



7

ನವೋಮಿ ತಿರುಗಿ ಬೆತ್ಲೇಹೇಮ್‌ಗೆ ಹೋದಳು. ಅದನ್ನು ಕಂಡು ಅವಳ ಜನರು ಸಂತೋಷಪಟ್ಟರು. ಆಗ ಅವಳು ಅವರಿಗೆ, ನನಗೆ 'ನವೋಮಿ' (ಒಳ್ಳೆಯ) ಎಂದು ಕರೆಯದೆ "ಮಾರ" (ಕಹಿ) ಎಂದು ಕರೆಯಿರಿ ಎಂದಳು. ಭಾಗ್ಯವಂತಳಾಗಿ ಹೋದೆನು, ಆದರೆ ಯಹೋವನನು ರೂತಳೊಬ್ಬಳನ್ನೇ ನನಗೆ ಬಿಟ್ಟು ನನ್ನನ್ನು ಗತಿಹೀನಳನ್ನಾಗಿ ಬರಮಾಡಿದನು.



8



ಮೋವಾಬ್‌ನಲ್ಲಿರುವಂತ ಹೆಚ್ಚಿನ ಜನರಂತೆ ರೂತಳು ಸಹಾ ವಿಗ್ರಹವನ್ನು ಆರಾದನೆ ಮಾಡುವವಳಾಗಿದ್ದಳು. ಆದರೆ ಅವಳು ಆ ವಿಗ್ರಹಗಳ ಆರಾದನೆಯನ್ನು ಬಿಟ್ಟು ಇಸ್ರಾಯೇಲ್ಯರ ಜೀವವುಳ್ಳ ದೇವರನ್ನು ಆರಾದನೆ ಮಾಡುವವಳಾದಳು ಮತ್ತು ನವೋಮಿಯನ್ನು ಸಾಕುವುದಕ್ಕಾಗಿ ರೂತಳು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಳು. ಪ್ರತಿ ದಿನ ಹೊಲವನ್ನ ಕೊಯ್ಯುವವರ ಹಿಂದೆ ಹೋಗಿ ಬಿದ್ದಿರುವ ಕಾಳುಗಳನ್ನು ಆರಿಸುತ್ತಿದ್ದಳು.



9



ರೂತಳು ತನ್ನ ಅತ್ತೆಯ ವಿಷಯದಲ್ಲಿ ಒಳ್ಳೆಯ ಅಬಿಪ್ರಾಯವುಳ್ಳವಳಾಗಿದ್ದಾಳೆಂದು ಆ ಹೊಲದ ಯಾಜಮಾನನಾದ ಬೋವಾಜನಿಗೆ ತಿಳಿಯಿತು. ಆದುದ್ದರಿಂದ ಬೋವಾಜನು ತನ್ನ ಹೊಲವನ್ನು ಕೊಯ್ಯುವ ಆಳುಗಳಿಗೆ ಹೇಳಿದ್ದೆನೆಂದರೆ, ನೀವು ಕೈ ತುಂಬುವಷ್ಟು ಬೀಜದ ತೆನೆಗಳನ್ನು ಹಾಗೆಯೆ ಬಿಡಿರಿ ಅದನ್ನು ರೂತಳು ಆರಿಸಿಕೊಳ್ಳಲಿ ಎಂದು ಹೇಳಿ ಅವಳನ್ನು ಇಷ್ಟ ಪಟ್ಟನು.

10



ರೂತಳು ನವೋಮಿಯ ಹತ್ತಿರ ಬೋವಾಜನ ವಿಷಯನ್ನು ತಿಳಿಸಿದಳು, ಆ ವಿಷಯನ್ನು ಕೇಳಿದ ನವೋಮಿಯು ದೇವರನ್ನು ಸ್ತುತಿಸಿದಳು. ಅವನು ನಮಗೆ ದೂರದ ಸಂಭಂದಿ ಇರಬೇಕು ಎಂದಳು.

11



ದಿನಗಳು ಹೋದಂತೆಲ್ಲಾ ಬೋವಾಜನು ರೂತಳನ್ನು ಮದುವೆಮಾಡಿಕೊಂಡು ಅವಳನ್ನು ಮತ್ತು ಅವಳ ಕುಟುಂಬವನ್ನು ನೋಡಿಕೊಳ್ಳಲು ಬಯಸಿದನು. ಆ ಸಮಯದಲ್ಲಿ ಮತ್ತೊಬ್ಬ ಸಂಭಂದಿಯಿದ್ದನು ಅವನಿಗೆ ಅವರ ಭೂಮಿಯು ಬೇಕಾಗಿತ್ತು ಆದರೆ ಅವನು ರೂತಳನ್ನು ಹೆಂಡತಿಯಾಗಿ ಮಾಡಿಕೊಳ್ಳಲು ಬಯಸಿರಲಿಲ್ಲಾ. ಒಂದನ್ನು ತಗೆದುಕೋಂಡು ಇನ್ನೊಂದನ್ನು ತಗೆದುಕೊಳ್ಳಲಾಗುವುದಿಲ್ಲ ಎಂದು ಧರ್ಮಶಾಸ್ತ್ರ ಹೇಳುತ್ತದೆ.



12

ಆ ದಿನಗಳಲ್ಲಿ ಯಾರು ಸಹಾ ತಮ್ಮ ಕಾರ್ಯವನ್ನು ಮಾಡುವದಕ್ಕಾಗಿ ಕೈಯನ್ನು ಕುಲುಕುತ್ತಿರಲಿಲ್ಲ. ಆ ಕಾರ್ಯವು ಸರಿ ಹೊಂದಿಸುವುದಕ್ಕಾಗಿ ಬೋವಾಜನು ತನ್ನ ಚಪ್ಪಲಿಯನ್ನು ಎಲ್ಲಾ ಜನರ ಮುಂದೆ ತಗೆದು ಕೊಡುವಾಗ ಆ ವ್ಯವಹಾರವು ಸರಿಹೊಂದಿತು. ರೂತಳನ್ನು ತನ್ನ ಹೆಂಡತಿಯನ್ನಾಗಿ ಪಡೆದುಕೊಂಡನು ನವೋಮಿಯು ಸಹಾ ಅವನ ಕುಟುಂಬದಲ್ಲೊಬ್ಬಳಾದಳು.



13

ಬೋವಾಜ್ ಮತ್ತು ರೂತಳಿಗೆ ಓಬೇದನೆಂಬ ಒಂದು ಮಗುವಾಯಿತು. ಅವನು ಇಸ್ರಾಯೇಲ್ಯರ ಅರಸನಾದ ದಾವೀದನಿಗೆ ಮುತ್ತಾತನಾದನು.



14

ಅಷ್ಟೇಅಲ್ಲದೆ ಆ ದಾವೀದನ ವಂಶದಲ್ಲಿ ಬರುವಂತ ಒಬೇದನ ಕುಲದಲ್ಲಿಯೆ ಯೇಸುವು ಹುಟ್ಟಿ ಬಂದನು. ಅವನು ರಾಜಾದಿ ರಾಜನು ಮಾನವ ಕುಲದ ರಕ್ಷಕನು ಆಗಿದ್ದಾನೆ.






ರೂತಳ ಪ್ರೀತಿಯ ಕಥೆ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ರೂತಳು

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**






16 60



ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16